ಇ) ಈ ಕಟ್ಟಡ ನಿರ್ಮಿಸಲು ಸ್ಥಳ ನಿಗದಿಪಡಿಸಲಾಗಿದೆಯೇ ಹಾಗೂ ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

ಅ) ಹೌದು

ಆ) ಈವರೆಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಇ) ಹೌದು

ಬೇಲೂರು ಪುರಸಭೆ ಇವರು ದಾನದ ರೂಪದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು 100 x 100 ಅಡಿ ಅಳತೆಯ ನಿವೇಶನವನ್ನು ಗ್ರಂಥಾಲಯಕ್ಕೆ ಉಚಿತವಾಗಿ ನೀಡಿರುತ್ತಾರೆ. 2012–13ನೇ ಸಾಲಿಗೆ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ಸಿಬ್ಬಂದಿ

102 : (199)

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ ದಕ್ಷಿಣ)

ಅ) ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಬೋಧೇತರ ಸಿಬ್ಬಂದಿ ವರ್ಗದವರಿಗೆ ವರ್ಗಾವಣೆ ನೀತಿ ಇದೆಯೇ.

ಆ) ಹಾಗಿದ್ದಲ್ಲಿ ಒಬ್ಬ 'ಸಿ' ವರ್ಗದ ನೌಕರ (ದ್ವಿದಸ, ಅಥವಾ ಪ್ರದಸ ಮತ್ತು ಅಧೀಕ್ಷಕರು ಒಂದು ಕಛೇರಿಯಲಿ ಎಷ್ಟು ವರ್ಷ ಸೇವೆ ಸಲ್ಲಿಸಬಹುದಾಗಿದೆ (ವಿವರ ನೀಡುವುದು)

ಇ) ಮತ್ತದೆ ಸ್ಥಳಕ್ಕೆ ವರ್ಗಾವಣೆ ಮಾಡುವುದನ್ನು ತಪ್ಪಿಸಲು ಅವಕಾಶವಿದೆಯೇ.

ಈ) ಇಲಾಖೆಯ ಎಲ್ಲಾ ಬೋಧಕೇತರ ಸಿಬ್ಬಂದಿ ವಿವಿಧ ಕಛೇರಿ ಹಾಗೂ ಶಾಲಾ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಲು ಸಾಧ್ಯವಿದೆಯೇ.

ಉ) ಕೆಲವು ಸಿಬ್ಬಂದಿ 15 ರಿಂದ 20 ವರ್ಷಗಳವರೆಗೆ ಪ್ರಮುಖ ಕಛೇರಿಗಳ ಆಯಕಟ್ಟಿನ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು ಅದೇ ರೀತಿ ಕೆಲವು ಸಿಬ್ಬಂದಿ ಶಾಲಾ ಕಾಲೇಜುಗಳಲ್ಲಿ 15 ರಿಂದ 20 ವರ್ಷ ಕೆಲಸ ನಿರ್ವಹಿಸುತವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಊ) ಹಾಗಿದ್ದಲ್ಲಿ ಈ ತಾರತಮ್ಯ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 4 ಎಸ್‌ಟಿಆರ್ 2001 ಬೆಂ. ದಿನಾಂಕ 22–11–2001 ರಂತೆ ಬೋಧಕೇತರ ಸರ್ಕಾರಿ ನೌಕರರಿಗೆ ಪ್ರತ್ಯೇಕವಾದ ವರ್ಗಾವಣೆ ಮಾರ್ಗಸೂಚಿ ಇರುತ್ತದೆ.

ಆ) ದ್ವಿತೀಯ ದರ್ಜೆ ಸಹಾಯಕ ಪ್ರಥಮ ದರ್ಜೆ ಸಹಾಯಕ ಹಾಗೂ ಅಧೀಕ್ಷಕರು 'ಸಿ' ದರ್ಜೆ ನೌಕರರಾಗಿದ್ದು ಒಂದು ಕಚೇರಿಯಲ್ಲಿ ಕನಿಷ್ಠ 5 ವರ್ಷಗಳ ಅವಧಿಗೆ ಸೇವೆ ಸಲ್ಲಿಸಬಹುದು.

ಇ) ಪುನಃ ಅದೇ ಸ್ಥಳಕ್ಕೆ ವರ್ಗಾವಣೆ ಮಾಡುವುದನ್ನು ತಪ್ಪಿಸಲು ಅವಕಾಶವಿರುವುದಿಲ್ಲ.

ಈ) ಬೋಧಕೇತರ ಸಿಬ್ಬಂದಿ ವರ್ಗದವರು ಇಲಾಖೆಯ ಕಚೇರಿ ಹಾಗೂ ಶಾಲೆಗಳಲ್ಲಿ ಕೆಲಸ ನಿರ್ವಹಿಸಲು ಅವಕಾಶವಿರುತ್ತದೆ. ಅಂದರೆ ಇರುವಂತಹ ಖಾಲಿ ಹುದ್ದೆಗಳನ್ನು ಕನಿಷ್ಠ ಸೇವೆ ಸಲ್ಲಿಸಿದಂತಹ ನೌಕರರು ಕೋರಿಕೆ ಮೇರೆಗೆ ವರ್ಗಾವಣೆ ಕೇಳಿಕೊಂಡಾಗ ಸರ್ಕಾರದ ವರ್ಗಾವಣೆ ಮಾರ್ಗಸೂಚಿಯಂತೆ ಪರಿಗಣಿಸಲಾಗುತ್ತದೆ.

ಉ) ಗಮನಕ್ಕೆ ಬಂದಿದೆ.

ಊ) ತಾರತಮ್ಯ ನಿವಾರಣೆಗೆ ವರ್ಗಾವಣೆ ಮಾರ್ಗಸೂಚಿಯಡಿ ಪರಿಶೀಲಿಸಲಾಗುವುದು.

ಪ್ರೌಢಶಾಲೆ ನಿರ್ಮಾಣ

166 : (245)

ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)

ಅ) ಗೌರಿಬಿದನೂರು ತಾಲ್ಲೂಕು ಸೊಣಗಾನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಕಟ್ಟಡ ಕಟ್ಟಲು 2 ಎಕರೆ ಜಮೀನು ಕೋರಿ ಒಂದು ವರ್ಷದ ಹಿಂದೆಯೇ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಕೋರಿಕೆಯಂತೆ ಜಮೀನನ್ನು ಹಸ್ತಾಂತರ ಮಾಡದೇ ಇರಲು ಕಾರಣವೇನು ಯಾವಾಗ ಹಸ್ತಾಂತರ ಮಾಡಲಾಗುವುದು ?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಗಮನಕ್ಕೆ ಬಂದಿರುತ್ತದೆ.